# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕವಿಪ್ರನಿನಿ ಕ್ರೀಡಾ ಸಂಸ್ಥೆಯ ವತಿಯಿಂದ ದಿನಾಂಕ: 15.03.2022 ರಂದು ಕಾವೇರಿ ಭವನದ ಕಾನ್‌ಫರೆನ್ಸ್ ಹಾಲ್ ನಲ್ಲಿ ಹಾಗೂ ಗೂಗಲ್ ಮೀಟ್ ಮೂಲಕ ಏರ್ಪಡಿಸಿದ್ದ ಕೇಂದ್ರ ಕಾರ್ಯಕಾರಿ ಸಮಿತಿಯ ಸಭಾ ನಡಾವಳಿಕೆಗಳು:

ಈ ಕೆಳಕಂಡ ಸದಸ್ಯರು ಸಭೆಯಲ್ಲಿ ಉಪಸ್ಥಿತರಾಗಿದ್ದರು.

| | | |
|---|---|---|
| 1 | ಶ್ರೀ ಜಿ ಆರ್ ಚಂದ್ರಶೇಖರಯ್ಯ | ನಿರ್ದೇಶಕರು (ಪ್ರಸರಣ), ಕವಿಪ್ರನಿನಿ ಮತ್ತು ಅಧ್ಯಕ್ಷರು, ಕವಿಪ್ರನಿನಿ, ಕ್ರೀಡಾ ಸಂಸ್ಥೆ |
| 2 | ಶ್ರೀ ಮಹೇಶ್ ಕರ್ಜಗಿ | ನಿರ್ದೇಶಕರು (ಆ ಮತ್ತು ಮಾ.ಸಂ), ಕವಿಪ್ರನಿನಿ ಹಾಗೂ ಹಿರಿಯ ಉಪಾಧ್ಯಕ್ಷರು, ಕವಿಪ್ರನಿನಿ ಕ್ರೀಡಾ ಸಂಸ್ಥೆ |
| 3 | ಶ್ರೀ ಭುವನೇಶ್ವರಯ್ಯ ಎನ್ ವಿ | ಆರ್ಥಿಕ ಸಲಹೆಗಾರರು(ಲೆ ಮತ್ತು ಸಂ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ಮತ್ತು ಉಪಾಧ್ಯಕ್ಷರು, ಕವಿಪ್ರನಿನಿ ಕ್ರೀಡಾ ಸಮಿತಿ. |
| 4 | ಶ್ರೀ ಬಸವರಾಜ್ ಬಿ ಪಾಟೀಲ್ | ಮುಖ್ಯ ಇಂಜನಿಯರ್(ವಿ), ಬೆವಿಕಂ, ಉತ್ತರ ವಲಯ ಹಾಗೂ ಅಧ್ಯಕ್ಷರು, ಬೆವಿಕಂ ಕ್ರೀಡಾ ಸಮಿತಿ |
| 5 | ಶ್ರೀ ರಮೇಶ ಎಲ್ ಬೆಂಡಿಗೇರಿ | ಮುಖ್ಯ ಇಂಜಿನಿಯರ್ (ವಿ) ಹುಬ್ಬಳ್ಳಿ ವಲಯ ಹಾಗೂ ಅಧ್ಯಕ್ಷರು, ಹೆಸ್ಕಾಂ ಕ್ರೀಡಾ ಸಮಿತಿ |
| 6 | ಶ್ರೀಮತಿ ಪುಷ್ಪಾ | ಮುಖ್ಯ ಇಂಜಿನಿಯರ್ (ವಿ) ಮಂಗಳೂರು ವಲಯ ಹಾಗೂ ಅಧ್ಯಕ್ಷರು, ಮೆಸ್ಕಾಂ ಕ್ರೀಡಾ ಸಮಿತಿ |
| 7 | ಶ್ರೀ ಬಿ.ಜೆ.ಉಮೇಶ್ | ಮುಖ್ಯ ಇಂಜನಿಯರ್(ವಿ), ಬೆವಿಕಂ, ದಕ್ಷಿಣ , ವಲಯ |
| 8 | ಶ್ರೀ ಹೆಚ್ ಜೆ ರಮೇಶ್ | ಮುಖ್ಯ ಇಂಜಿನಿಯರ್ (ವಿ), ಬೆವಿಕಂ, ಗ್ರಾಮೀಣ ವಲಯ |
| 9 | ಶ್ರೀ ಕಲ್ಯಾಣ ಕುಮಾರ್ | ನಿಯಂತ್ರಣಾಧಿಕಾರಿ ಮತ್ತು, ಬಿ.ಎಂ.ಎ.ಜೆಡ್, ಉತ್ತರ ವಲಯ, ಬೆಸ್ಕಾಂ, ಬೆಂಗಳೂರು. |
| 10 | ಶ್ರೀ ಮಖೆನಾ ಡಿಸೋಜಾ | ನಿಯಂತ್ರಣಾಧಿಕಾರಿ, ಮೆಸ್ಕಾಂ. ಮಂಗಳೂರು. |
| 11 | ಶ್ರೀ ಶ್ರೀ ಸಂಗಮೇಸ್ವರ | ನಿಯಂತ್ರಣಾಧಿಕಾರಿ, ಜೆಸ್ಕಾಂ. ಕಲಬುರಗಿ. |
| 12 | ಶ್ರೀ ಹೆಚ್ ಎಸ್ ಸೋಮಶಂಕರ | ಉಪನಿಯಂತ್ರಣಾಧಿಕಾರಿ(ತ ಮತ್ತು ಕ್ರೀ) ಹಾಗೂ ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಕ್ರೀಡಾ ಸಂಸ್ಥೆ, ಮಾ.ಸಂ.ಅ ಕೇಂದ್ರ ಕವಿಪ್ರನಿನಿ, ಬೆಂಗಳೂರು. |
| 13 | ಶ್ರೀ ಕೆ ಬಲರಾಮ್ | ಹಿರಿಯ ಉಪಾಧ್ಯಕ್ಷರು, ಕವಿಪ್ರನಿ ನೌಕರರ ಸಂಘ (659) ಬೆಂಗಳೂರು. |
| 14 | ಶ್ರೀ ರಾಘವೇಂದ್ರ.ಎಸ್.ಎನ್ | ಲೆಕ್ಕಾಧಿಕಾರಿ ಹಾಗೂ ಕ್ರೀಡಾ ಕಾರ್ಯದರ್ಶಿ, ಜೆಸ್ಕಾಂ ಕ್ರೀಡಾ ಸಮಿತಿ, ಕಲಬುರಗಿ. |
| 15 | ಶ್ರೀ ಶಾಂತಾನಂದ ಶೆಟ್ಟಿ | ಲೆಕ್ಕಾಧಿಕಾರಿ ಹಾಗೂ ಕ್ರೀಡಾ ಕಾರ್ಯದರ್ಶಿ, ಮೆಸ್ಕಾಂ ಕ್ರೀಡಾ ಸಮಿತಿ, ಮಂಗಳೂರು. |
| 16 | ಶ್ರೀಮತಿ ನಿಖಿತ ತೇಜ ಆಚಾರ್ | ಲೆಕ್ಕಾಧಿಕಾರಿ, ಟಿ.ಬಿ.ಸಿ, ಕವಿಪ್ರನಿನಿ ಹಾಗೂ ಮಹಿಳೆ ಪ್ರತಿನಿಧಿ. |
| 17 | ಶ್ರೀ ಎಂ.ಎ ಮಂಜುನಾಥ | ಹಿರಿಯ ಸಹಾಯಕ, ಕ್ರೀಡಾ ಕಾರ್ಯದರ್ಶಿ, ಕ್ರೀಡಾ ಸಮಿತಿ, ಸೆಸ್ಕ್, ಮೈಸೂರು. |
| 18 | ಶ್ರೀ ವಿಷ್ಣು ವೈ ಕಟ್ಟಣ್ಣವರ್ | ಕ್ರೀಡಾ ಕಾರ್ಯದರ್ಶಿ, ಕ್ರೀಡಾ ಸಮಿತಿ, ಹೆಸ್ಕಾಂ |
| 19 | ಶ್ರೀ ಅನಿಲ್ ಮುಗಳಿ | ಲೆಕ್ಕಾಧಿಕಾರಿ, ಕಂಪನಿ ಕಾರ್ಯಾಲಯ, ಗೆಸ್ಕಾಂ, ಕಲಬುರ ಗಿ |
| 20 | ಶ್ರೀ ಜೆ ಲೋಕೇಶ್ | ಅಧ್ಯಕ್ಷರು, ಕವಿಪ್ರನಿನಿ, ಡಿಪ್ಲೋಮೊ ಇಂಜನಿಯರ್ ಸಂಘದ ಪ್ರತಿನಿಧಿ. |
| 21 | ಶ್ರೀ ರಾಜ್‌ಕುಮಾರ್ ಎಸ್ | ಸ.ಕಾ.ಇಂ ಬಿ.ಆರ್.ಸಿ ಹಾಗೂ ಉಪ ಖಜಾಂಚಿ, ಪಜಾ. ಪಪಂ ಕಲ್ಯಾಣ ಸಂಘ |
| 22 | ಶ್ರೀ ಜಿ ಗುರುಲಿಂಗಯ್ಯ | ಪ್ರಧಾನ ಕಾರ್ಯದರ್ಶಿ, ಪಜಾ.ಪಪಂ ಕಲ್ಯಾಣ ಸಂಘದ ಪ್ರತಿನಿಧಿ. |
| 23 | ಶ್ರೀ ಬಿ ವಿ ನಾಗರಾಜ್ | ಕಾರ್ಯದರ್ಶಿ ಕವಿಮಂ ಇಂಜಿನಿಯರ್ಸ್ ಸಂಘ. |
| 24 | ಶ್ರೀ ನಾಗಭೂಷಣ್ ಎನ್ ಜಿ | ಜಂಟಿ ಕಾರ್ಯದರ್ಶಿ ಕವಿಮಂ ಇಂಜಿನಿಯರ್ಸ್ ಸಂಘ. |
| 25 | ಶ್ರೀ ಜಗದೀಶ್ | ಹಿರಿಯ ಸಹಾಯಕ, ಕವಿಪ್ರನಿ, ನೌಕರರ ಸಂಘದ ಪ್ರತಿನಿಧಿ. |
| 26 | ಶ್ರೀ ಮಹೇಶ್ ಬಿ ಎನ್ | ಕಿರಿಯ ಸಹಾಯಕ, ಟಿ ಮತ್ತು ಪಿ ಶಾಖೆ, ಕವಿಪ್ರನಿನಿ ಹಾಗೂ, ಕವಿಪ್ರನಿನಿ ಮತ್ತು ಕವಿಪ್ರನಿ ನೌಕರರ ಸಂಘದ ಪ್ರತಿನಿಧಿ |
| 27 | ಶ್ರೀ ಎನ್.ನೀಲಕುಮಾರ್ | ಕಿರಿಯ ಆಪ್ತಸಹಾಯಕ, ಟಿಎ&ಕ್ಯೂಸಿ ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು. |
| 28 | ಶ್ರೀ ಡಿ. ರಾಜ್‌ಕುಮಾರ್ | ಸಹಾಯಕ, ಕ್ರೀಡಾ ಶಾಖೆ, ಮಾ.ಸಂ.ಅ ಕೇಂದ್ರ ಕವಿಪ್ರನಿನಿ, ಬೆಂಗಳೂರು. |
| 29 | ಶ್ರೀ ಮೋಹನ್ ಹೆಚ್ ಎಂ | ಕಿರಿಯ ಇಂಜಿನಿಯರ್, ದೂರ ಸಂಪರ್ಕ ವಿಭಾಗ, ಕವಿಪ್ರನಿನಿ, ಬೆಂಗಳೂರು. |
| 30 | ಶ್ರೀ ಮಂಜುನಾಥ್ ಅರ್ | ಮೆ.ಗ್ರೇ 1, ದೂರ ಸಂಪರ್ಕ ವಿಭಾಗ, ಕವಿಪ್ರನಿನಿ, ಬೆಂಗಳೂರು. |

ಕವಿಪ್ರನಿನಿ ಕ್ರೀಡಾ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಹೆಚ್ ಎಸ್ ಸೋಮಶಂಕರ ರವರು, ಶ್ರೀ ಜಿ ಆರ್ ಚಂದ್ರಶೇಖರಯ್ಯ, ನಿರ್ದೇಶಕರು (ಪ್ರಸರಣ) ಹಾಗೂ ಕವಿಪ್ರನಿನಿ ಕ್ರೀಡಾ ಸಂಸ್ಥೆಯ ಅಧ್ಯಕ್ಷರು, ಶ್ರೀ ಮಹೇಶ್ ಕರ್ಜಗಿ, ನಿರ್ದೇಶಕರು (ಆ & ಮಾ.ಸಂ), ಕವಿಪ್ರನಿನಿ ಹಾಗೂ ಕವಿಪ್ರನಿನಿ ಕ್ರೀಡಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷರು, ಶ್ರೀ ಭುವನೇಶ್ವರಯ್ಯ, ಎಸ್ ವಿ, ಆರ್ಥಿಕ ಸಲಹೆಗಾರರು(ಲೆ & ಸಂ), ಕವಿಪ್ರನಿನಿ ಹಾಗೂ ಕವಿಪ್ರನಿನಿ ಕ್ರೀಡಾ ಸಂಸ್ಥೆಯ ಉಪಾಧ್ಯಕ್ಷರು ಮತ್ತು ಎಲ್ಲಾ ಸದಸ್ಯರುಗಳಿಗೆ ಸ್ವಾಗತ ಕೋರಿದರು. ಶ್ರೀ ಜಿ ಆರ್ ಚಂದ್ರಶೇಖರಯ್ಯ, ನಿರ್ದೇಶಕರು (ಪ್ರಸರಣ), ಕವಿಪ್ರನಿನಿ ಇವರು ಅಧ್ಯಕ್ಷತೆ ವಹಿಸಿ ಸಭೆಯ ಕಲಾಪಗಳನ್ನು ನಡೆಸಿಕೊಟ್ಟರು.

1. <u>2022–23ನೇ ಸಾಲಿನ ವಾರ್ಷಿಕ ಕ್ರೀಡಾ ಚಟುವಟಿಕೆಗಳಿಗೆ ಅನುದಾನ ಕುರಿತು</u>

ಕವಿಪ್ರನಿನಿ ಕ್ರೀಡಾ ಚಟುವಟಿಕೆಗಳನ್ನು ನಡೆಸಲು ತಗಲುವ ವೆಚ್ಚಗಳನ್ನು ಭರಿಸಲು ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಜೆಸ್ಕಾಂ ಸೆಸ್ಕ್ ಮತ್ತು ಕವಿಪ್ರನಿನಿ ವತಿಯಿಂದ ಈವರೆವಿಗೂ ನೀಡಲಾಗುತ್ತಿದ್ದ ರೂ800000/– (ಎಂಟು ಲಕ್ಷ ರೂ) ಗಳ ಮೊತ್ತವನ್ನು ರೂ 1000000 (ಹತ್ತು ಲಕ್ಷ ರೂ) ಗಳಿಗೆ ಹೆಚ್ಚಳ ಮಾಡಲಾಗಿದೆ.

2. <u>ಕಂಪನಿಮಟ್ಟದ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆ ಬಗ್ಗೆ.</u>

ಎಲ್ಲಾ ಕಂಪನಿಗಳಲ್ಲಿ 2022–23ನೇ ಸಾಲಿನ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಂಪನಿ ಮಟ್ಟದ ಆಯ್ಕೆ ಪ್ರಕ್ರಿಯೆಗಳನ್ನು ಮೇ 2022 ತಿಂಗಳಿನಲ್ಲಿ ಮುಕ್ತಾಯಗೊಳಿಸಲು ಎಸ್ಕಾಂಗಳ ಕ್ರೀಡಾ ಸಮಿತಿಗಳಿಗೆ ಸೂಚಿಸಲಾಗಿದೆ. ಎಲ್ಲಾ ಕಂಪನಿಗಳಲ್ಲಿ ಆಯ್ಕೆ ಪ್ರಕ್ರಿಯೆಗಳ ದಿನಾಂಕಗಳನ್ನು ನಿಗದಿಪಡಿಸಿ ಸಂಬಂಧಪಟ್ಟ ಕಂಪನಿಯ ಎಲ್ಲಾ ಕ್ರೀಡಾಪಟುಗಳಿಗೆ ಮುಂಗಡವಾಗಿ ಮಾಹಿತಿ ನೀಡಲು ಹಾಗೂ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶಕರು(ಆ ಮತ್ತು ಮಾ.ಸಂ) ರವರು ಆದೇಶಿಸಿದರು.

3. <u>ಅಂತರಕಂಪನಿ ಪಂದ್ಯಾವಳಿಗಳ ಬಗ್ಗೆ</u>

2022–23ನೇ ಸಾಲಿನ ಅಂತರಕಂಪನಿ ಕ್ರೀಡಾ ಕೂಟಗಳನ್ನು ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಜೆಸ್ಕಾಂ ಮತ್ತು ಸೆಸ್ಕ್ ಕ್ರೀಡಾ ಸಮಿತಿ ರವರು ಆಗಸ್ಟ್ 2022 ರ ಒಳಗಾಗಿ ಆಯೋಜಿಸಲು ಸರ್ವಾನುಮತದ ತೀರ್ಮಾನ ಕೈಗೊಳ್ಳಲಾಗಿದೆ. ಹಾಗೂ ಅಂತರಕಂಪನಿ ಕ್ರೀಡಾ ಕೂಟಗಳನ್ನು ಆಯೋಜಿಸಲು ಎಲ್ಲಾ ಕಂಪನಿಗಳಿಗೆ ಕ್ರೀಡೆಗಳನ್ನು ಹಂಚಿಕೆ ಮಾಡುವ ಬಗ್ಗೆ ಜೂನ್ 2022 ರ ಮೊದಲನೇ ವಾರದಲ್ಲಿ ಮತ್ತೊಂದು ಕವಿಪ್ರನಿನಿ ಕ್ರೀಡಾ ಸಂಸ್ಥೆಯ ಕೇಂದ್ರ ಕಾರ್ಯಕಾರಿ ಸಭೆಯನ್ನು ಏರ್ಪಡಿಸಿ ಚರ್ಚಿಸುವುದಾಗಿ ಸರ್ವಾನುಮತದ ತೀರ್ಮಾನ ಕೈಗೊಳ್ಳಲಾಗಿದೆ.

<u>ಸೂಚನೆಗಳು:</u>

- ಅಂತರ ಕಂಪನಿ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಕ್ರೀಡಾ ವೀಕ್ಷಕರು, ವ್ಯವಸ್ಥಾಪಕರು ಮತ್ತು ಕ್ರೀಡಾಪಟುಗಳ ವಸತಿ ಸೌಲಭ್ಯವನ್ನು ವ್ಯವಸ್ಥಾಪಕರ ಸಭೆ ದಿನಾಂಕದಿಂದ ಕ್ರೀಡಾಕೂಟದ ಮುಕ್ತಾಯವಾಗುವ ಮುಂದಿನ ಒಂದು ದಿನದವರೆಗೆ ಮಾತ್ರ ಸದರಿ ಕಂಪನಿಯ ಕ್ರೀಡಾ ಸಮಿತಿ ರವರು ವ್ಯವಸ್ಥೆ ಮಾಡಲು ಸೂಚಿಸಲಾಗಿದೆ,

- ಅಂತರ ಕಂಪನಿ ಕ್ರೀಡಾಕೂಟಗಳಲ್ಲಿ ಕಂಪನಿ ಕ್ರೀಡಾ ಸಮಿತಿ ರವರು ಪ್ರತಿಯೊಂದು ಕ್ರೀಡೆಗೆ ತಂಡದ ವ್ಯವಸ್ಥಾಪಕರಾಗಿ ಒಬ್ಬರನ್ನು ಮಾತ್ರ ನಿಯೋಜನೆ ಮಾಡತಕ್ಕದ್ದು. ಕ್ರೀಡಾಪಟುಗಳು ಮತ್ತು ಕ್ರೀಡೆಗಳಲ್ಲಿ ಅನುಭವವುಳ್ಳ ಮತ್ತು ಕ್ರೀಡೆಗಳ ಬಗ್ಗೆ ಆಸಕ್ತಿ ಇರುವ, ಜವಾಬ್ದಾರಿ ಹೊರುವ ಹಾಗೂ ಇಡೀ ಕ್ರೀಡಾಕೂಟದಲ್ಲಿ ಸಕ್ರಿಯವಾಗಿ ತಂಡವನ್ನು ಹುರಿದುಂಬಿಸುವ ನೌಕರರು/ಅಧಿಕಾರಿಯನ್ನು ಮಾತ್ರ ವ್ಯವಸ್ಥಾಪಕರನ್ನಾಗಿ ನಿಯೋಜಿಸಲು ಹಾಗೂ ಸದರಿ ವ್ಯವಸ್ಥಾಪಕರು ಕ್ರೀಡಾಕೂಟದ ನಂತರ ಕಂಪನಿಯ ಕ್ರೀಡಾ ಸಮಿತಿಗೆ ಹಾಗೂ ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಕ್ರೀಡಾ ಸಂಸ್ಥೆ ಮಾ.ಸಂ.ಅ ಕೇಂದ್ರ, ಕವಿಪ್ರನಿನಿ, ಬೆಂಗಳೂರು ರವರಿಗೆ ವರದಿಯನ್ನು ಸಲ್ಲಿಸಬೇಕೆಂದು ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

4. ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ಕ್ರೀಡಾಕೂಟಗಳಲ್ಲಿ ಕವಿಪ್ರನಿನಿ ತಂಡಗಳು ಭಾಗವಹಿಸುವ ಬಗ್ಗೆ.

ಅಂತರ ಕಂಪನಿ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಕವಿಪ್ರನಿನಿ ತಂಡಗಳಿಗೆ ಆಯ್ಕೆಯಾದ ಕ್ರೀಡಾಪಟುಗಳು ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಆಸಕ್ತಿ ವಹಿಸುತ್ತಿಲ್ಲ ಎಂಬ ವಿಷಯ ಕ್ರೀಡಾ ಸಮಿತಿಯ ಗಮನಕ್ಕೆ ಬಂದಿದ್ದು ಸದರಿ ಕ್ರೀಡಾಪಟುಗಳು ವೈಯಕ್ತಿಕ ತುರ್ತು ಸಂದರ್ಭಗಳಲ್ಲದೆ ಬೇರೆಯಾವುದೇ ಕಾರಣಕ್ಕಾಗಿ ಸದರಿ ಪಂದ್ಯಾವಳಿಗಳಲ್ಲಿ ಭಾಗವಹಿಸಲು ವಿಫಲವಾದರೆ ಅಂತಹ ಕ್ರೀಡಾಪಟುಗಳ ಮೇಲೆ ಗಂಭೀರವಾದ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು.

2022–23 ನೇ ಸಾಲಿನ ಅಂತರ ಕಂಪನಿ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಕವಿಪ್ರನಿನಿ ತಂಡಗಳಿಗೆ ಆಯ್ಕೆಯಾದ ಕ್ರೀಡಾಪಟುಗಳಿಗೆ ಕನಿಷ್ಠ 2 ಅಭ್ಯಾಸ/ಆಯ್ಕೆ ತರಬೇತಿಯನ್ನು ನಡೆಸಿ ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ಕ್ರೀಡಾಕೂಟಕ್ಕೆ ಬೇಕಾದ ಉತ್ತಮ ಮತ್ತು ಅರ್ಹ ಕ್ರೀಡಾಪಟುಗಳ ಸಂಖ್ಯೆಯನ್ನು ಆಯ್ಕೆ ಮಾಡಿ ನಿಯೋಜನೆ ಮಾಡಲು ನಿರ್ದೇಶಕರು(ತಾಂತ್ರಿಕ) ರವರ ನಿರ್ದೇಶನವನ್ನು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು

ನಿಗಮ ಆದೇಶ ಸಂಖ್ಯೆ:ಕವಿಪ್ರನಿನಿ/ಬಿ16/ಬಿ4/681/82–83 ದಿನಾಂಕ:21.02.2015ರ ಅನ್ವಯ ಈಗಾಗಲೆ ಚಾಲ್ತಿಯಲ್ಲಿರುವ ಪ್ರಯಾಣ ಸೌಲಭ್ಯ, ರೈಲುಗಳಲ್ಲಿ, ಎ.ಸಿ. 2ಟೈರ್ ದರ್ಜೆ ಮತ್ತು ದಿನ ಭತ್ಯೆ ರಾಜ್ಯದ ಒಳಗಡೆ **ರೂ.350/–(ಮುನ್ನೂರ ಐವತ್ತು ರೂಗಳು)**ಗಳ ದರವನ್ನು ಹಾಗೂ ರಾಜ್ಯದ ಹೊರಗಡೆ **ರೂ.500/–(ಐನೂರು ರೂಗಳು)**ಗಳ ದರವನ್ನು ಸದರಿ ದಿನ ಭತ್ಯೆ ಮೊತ್ತವನ್ನು ಹೆಚ್ಚಳಗೊಳಿಸಲು ಹಾಗೂ ಕ್ರೀಡಾಪಟುಗಳು ವಿಮಾನ ಪ್ರಯಾಣ ಮಾಡಲು ಸಹಾಯವಾಗುವಂತಹ ಒಂದು ನಿರ್ದಿಷ್ಟ ಮೊತ್ತವನ್ನು ನಿಗದಿ ಪಡಿಸಲು ಸಭೆಯಲ್ಲಿ ತೀರ್ಮಾನ ಕೈಗೊಂಡಿದ್ದು ಸದರಿ ವಿಷಯದ ಬಗ್ಗೆ ಕ್ರೀಡಾಧಿಕಾರಿ ರವರು ಕೂಡಲೆ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಲಾಗಿದೆ.

ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕವಿಪ್ರನಿನಿ ಕ್ರೀಡಾಪಟುಗಳಿಗೆ ಮತ್ತು ತಂಡದ ವ್ಯವಸ್ಥಾಪಕರು/ತರಬೇತುದಾರರು ರವರಿಗೆ ಕವಿಪ್ರನಿನಿ ಕ್ರೀಡಾ ಸಂಸ್ಥೆ ವತಿಯಿಂದ ಕ್ರೀಡಾಪಟುಗಳಿಗೆ ಕ್ರಮವಾಗಿ ರೂ 4250/– ಮೊತ್ತದ ಮತ್ತು ರೂ 5250/– ಮೊತ್ತದ ಸ್ಪೋರ್ಟ್ಸ್ ಕಿಟ್‌ಗಳನ್ನು ಖರೀದಿಸಿ ನೀಡಲಾಗುತ್ತಿತ್ತು ಸದರಿ ಕಿಟ್‌ಗಳನ್ನು ಖರೀದಿಸಿ ನೀಡಲು ಈಗಾಗಲೇ ಮಂಜೂರಾಗಿರುವ ಮೊತ್ತವನ್ನು ಹೆಚ್ಚಳಗೊಳಿಸಲು ಸಭೆಯಲ್ಲಿ ತೀರ್ಮಾನ ಕೈಗೊಂಡಿದ್ದು ಸದರಿ ವಿಷಯದ ಬಗ್ಗೆ ಕ್ರೀಡಾಧಿಕಾರಿ ರವರು ಕೂಡಲೇ ಪ್ರಸ್ತಾವನೆ ಸಲ್ಲಿಸಲು ತಿಳಿಸಲಾಗಿದೆ.

5. ಕವಿಪ್ರನಿನಿ ಕಬಡ್ಡಿ ತಂಡದ ಕ್ರೀಡಾಪಟುಗಳಿಗೆ ಪ್ರತಿದಿನ ಸಂಜೆ 4 ಗಂಟೆಗಳ ನಂತರ ಅಭ್ಯಾಸ ಮಾಡಲು ನೀಡಿರುವ ಅನುಮತಿಯ ಬಗ್ಗೆ.

ಕವಿಪ್ರನಿನಿ ಕಬಡ್ಡಿ ತಂಡದ ಸುಮಾರು 8 ಕ್ರೀಡಾಪಟುಗಳಿಗೆ ಪ್ರತಿ ಕೆಲಸದ ದಿನ ಸಂಜೆ 4 ಗಂಟೆಯ ನಂತರ ಕಬಡ್ಡಿ ಅಭ್ಯಾಸ ಮಾಡಲು ಈಗಾಗಲೇ ನೀಡಿರುವ ಅನುಮತಿಯನ್ನು ಹಿಂಪಡೆಯಲು ನಿರ್ಧರಿಸಲಾಗಿದೆ.

6. ಕ್ರೀಡೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳು/ಪ್ರಕರಣಗಳ ಬಗ್ಗೆ

ಕ್ರೀಡೆಗೆ ಸಂಬಂಧಪಟ್ಟ ಕೆಲವು ವಿಷಯಗಳು/ಪ್ರಕರಣಗಳು ನಿಗಮದ ಇತರೆ ಶಾಖೆಗಳಿಂದ ಹಾಗೂ ಕ್ರೀಡಾಪಟುಗಳು ಕಾರ್ಯ ನಿರ್ವಹಿಸುತ್ತಿರುವ ಶಾಖೆಗಳಿಂದ ಪ್ರಕ್ರಿಯೆಗೊಳಿಸಲಾಗುತ್ತಿರುವುದು ಕಂಡುಬಂದಿರುವುದನ್ನು ಕವಿಪ್ರನಿನಿಯ ಕ್ರೀಡಾಧಿಕಾರಿ ರವರು ಸಭೆಯಲ್ಲಿ ಪ್ರಸ್ತಾಪಿಸಿದರು. ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿ ಕ್ರೀಡೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳು/ಪ್ರಕರಣಗಳು ಪ್ರಧಾನ ಕಾರ್ಯದರ್ಶಿ ಕವಿಪ್ರನಿನಿ ಕ್ರೀಡಾ ಸಂಸ್ಥೆಯಿಂದಲೇ ಪ್ರಕ್ರಿಯೆಗೊಳಿಸಲು ನಿರ್ದೇಕರು(ಮಾ.ಸಂ), ಕವಿಪ್ರನಿನಿ ರವರು ಸೂಚಿಸಿರುತ್ತಾರೆ.

7. ರಾಜ್ಯ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಅಭ್ಯಾಸ ಮಾಡಲು ಕಾಲಾವಕಾ ನೀಡುವ ಬಗ್ಗೆ

ಕವಿಪ್ರನಿನಿಯ ಕೆಲವು ಕ್ರೀಡಾಪಟುಗಳು ರಾಜ್ಯ/ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳಲ್ಲಿ ಪ್ರತಿವರ್ಷ ಭಾಗವಹಿಸಿ ಉತ್ತಮ ಸಾಧನೆಗಳನ್ನು ಮಾಡುತ್ತಿದ್ದಾರೆ. ಇಂತಹ ಕ್ರೀಡಾಪಟುಗಳು ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಮುನ್ನ ವಿಶೇಷ ಅಭ್ಯಾಸ ಮಾಡಲು ಅರ್ಧದಿನದ ರಜೆ ಅಥವಾ ಕೆಲಸದ ವೇಳೆಯಲ್ಲಿ ಕೆಲವು ಗಂಟೆಗಳ ಅನುಮತಿಯನ್ನು ನೀಡಬಹುದಾಗಿದೆ ಎಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆ ನೀಡಿದೆ.

8. ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ವಾರ್ಷಿಕ ಸಭೆಯಲ್ಲಿ ಭಾಗವಹಿಸುವ ಬಗ್ಗೆ.

ಕವಿಪ್ರನಿನಿ ಕ್ರೀಡಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷರಾದ ನಿರ್ದೇಶಕರು(ಆ ಮತ್ತು ಮಾ.ಸಂ), ಕವಿಪ್ರನಿನಿ ಹಾಗೂ ಪ್ರಧಾನ ಕಾರ್ಯದರ್ಶಿಯವರು, ಇವರುಗಳು ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ವಾರ್ಷಿಕ ಸಭೆಯಲ್ಲಿ ಕವಿಪ್ರನಿನಿ ಕ್ರೀಡಾ ಸಂಸ್ಥೆಯ ಪರವಾಗಿ ಭಾಗವಹಿಸಲು ಸರ್ವಾನುಮತದಿಂದ ಸಭೆಯು ಒಪ್ಪಿಗೆ ನೀಡಿದೆ.

ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ವಾರ್ಷಿಕ ಮಹಾಸಭೆ 2022ರಲ್ಲಿ ಭಾಗವಹಿಸುವ ಕವಿಪ್ರನಿನಿ ಕ್ರೀಡಾ ಸಂಸ್ಥೆಯ ಪದಾಧಿಕಾರಿಗಳು 2022-23ನೇ ಸಾಲಿನಲ್ಲಿ ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ಯಾವುದಾದರೂ ಒಂದು ಕ್ರೀಡೆಯನ್ನು ಕವಿಪ್ರನಿನಿ ಕ್ರೀಡಾ ಸಂಸ್ಥೆಯು ಆತಿಥೇಯ (Host) ಪಾತ್ರವನ್ನು ವಹಿಸಿ ರಾಷ್ಟ್ರ ಮಟ್ಟದಲ್ಲಿ ಆಯೋಜಿಸುವ ಪ್ರಸ್ತಾವನೆಯನ್ನು ಚರ್ಚಿಸಿಬಹುದೆಂದು ಸಭೆಯಲ್ಲಿ ತೀರ್ಮಾನಿಸಲಾಗಿದೆ.

9. ಕ್ರೀಡಾಪಟುಗಳ ಅಶಿಸ್ತಿನ ವರ್ತನೆಯ ಬಗ್ಗೆ.

ಕಂಪನಿ ಮಟ್ಟದ ಆಯ್ಕೆ ಪ್ರಕ್ರಿಯೆಗಳಲ್ಲಿ, ಅಂತರ ಕಂಪನಿ ಕ್ರೀಡಾಕೂಟಗಳಲ್ಲಿ, ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ಪಂದ್ಯಾವಳಿಗಳಲ್ಲಿ ಮತ್ತು ತರಬೇತಿಗಳಲ್ಲಿ ಕ್ರೀಡಾಪಟುಗಳು, ವ್ಯವಸ್ಥಾಪಕರು, ತರಬೇತುದಾರರು ಅಶಿಸ್ತು/ ದುರ್ನಡತೆಯಿಂದ ನಡೆದುಕೊಳ್ಳುವ ಅಧಿಕಾರಿ/ನೌಕರರ ವಿರುದ್ಧ ಕಂಪನಿಯ ಸಿ.ಡಿ.ಸಿ.ಎ 1987 ನಿಭಂದನೆಯ ಮತ್ತು ಕವಿಪ್ರನಿನಿಯ ನಡತೆ ನಿಯಮ 1988ರ ಪ್ರಕಾರ ಶಿಸ್ತು ಕ್ರಮವನ್ನು ಕೈಗೊಳ್ಳತಕ್ಕದ್ದು ಎಂದು ನಿರ್ದೇಶಕರು (ತಾಂತ್ರಿಕ), ಕವಿಪ್ರನಿನಿ ರವರು ಸಭೆಯಲ್ಲಿ ತಿಳಿಸಿದರು.

10. ಅಂತರರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾಗವಹಿಸಲು ತಗಲುವ ವೆಚ್ಚಗಳನ್ನು ಕವಿಪ್ರನಿನಿ/ಎಸ್ಕಾಂ ಗಳ ವತಿಯಿಂದ ಭರಿಸುವ ಬಗ್ಗೆ

ಕವಿಪ್ರನಿನಿಯ ಕೆಲವು ಕ್ರೀಡಾಪಟುಗಳು ಅಂತರರಾಷ್ಟ್ರೀಯ ಪಂದ್ಯಾವಳಿಗಳಿಗೆ ಭಾರತವನ್ನು ಪ್ರತಿನಿಧಿಸಿ ಭಾಗವಹಿಸಲು ಆಯ್ಕೆಯಾಗುತ್ತಿದ್ದು, ಸದರಿ ಪಂದ್ಯಾವಳಿಯಲ್ಲಿ ಭಾಗವಹಿಸಲು ತಗಲುವ ವೆಚ್ಚಗಳನ್ನು ಕವಿಪ್ರನಿನಿ/ಕಂಪನಿಗಳ ವತಿಯಿಂದ ಭರಿಸಲು ಅನುಮೋದನೆಗಳನ್ನು ನೀಡಲಾಗುತ್ತಿದೆ. ಆದರೆ ಅಂತರರಾಷ್ಟ್ರೀಯ ಪಂದ್ಯಾವಳಿಗಳೆಂದರೆ, ಯಾವ ಪಂದ್ಯಾವಳಿಗಳಿಗೆ ಹಾಗೂ ಒಂದೇ ವರ್ಷದಲ್ಲಿ ಎಷ್ಟು ಅಂತರರಾಷ್ಟ್ರೀಯ ಪಂದ್ಯಾವಳಿಗಳಿಗೆ ತಗಲುವ ವೆಚ್ಚಗಳನ್ನು ಕವಿಪ್ರನಿನಿ/ಕಂಪನಿಗಳ ವತಿಯಿಂದ ಭರಿಸಲು ಅನುಮೋದನೆಗಳನ್ನು ನೀಡಬಹುದಾಗಿದೆ ಎಂದು ಚರ್ಚಿಸಲಾಯಿತು. ಸದರಿ ವಿಷಯದ ಬಗ್ಗೆ ನಿರ್ದೇಶಕರು(ಆ ಮತ್ತು ಮಾ.ಸಂ), ಕವಿಪ್ರನಿನಿ ರವರು ವಿಶ್ವ ಮತ್ತು ಏಷ್ಯಾನ್ ಮಟ್ಟದ ಕ್ರೀಡಾಕೂಟಗಳಿಗೆ ಸೀಮಿತಿಗೊಳಿಸಬಹುದಾಗಿದೆ ಎಂದು ತಿಳಿಸಿದರು. ಆದಾಗ್ಯೂ ಇನ್ನಿತರೆ ಅಂತರರಾಷ್ಟ್ರೀಯ ಪಂದ್ಯಾವಳಿಗಳ ಬಗ್ಗೆ ಹಾಗೂ ವರ್ಷದಲ್ಲಿ ಎಷ್ಟು ಪಂದ್ಯಾವಳಿಗಳಿಗೆ ನೀಡಬಹುದು ಎಂಬುದರ ಬಗ್ಗೆ ಕ್ರೀಡಾಧಿಕಾರಿ, ಕವಿಪ್ರನಿನಿ ರವರೊಂದಿಗೆ ಚರ್ಚಿಸುವುದಾಗಿ ತಿಳಿಸಿರುತ್ತಾರೆ.

11. **ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಸಾಧನೆಗಳಿಗೆ ವಿಶೇಷ ಬಡ್ತಿ ನೀಡುವ ಬಗ್ಗೆ**

ರಾಷ್ಟ್ರೀಯ ಮತ್ತು ಅಂತರರಾಷ್ಟ್ರಿಯ ಮಟ್ಟದಲ್ಲಿ ಸಾಧನೆ ಮಾಡುವ ಕ್ರೀಡಾಪಟುಗಳಿಗೆ ವಿಶೇಷ ಬಡ್ತಿ ನೀಡುವ ಬಗ್ಗೆ ನಿಗಮದ ಸೇವಾ ನಿಭಂದನೆಯಲ್ಲಿ (BESR) ಇರುವುದಾಗಿ ಸಭೆಯಲ್ಲಿ ಚರ್ಚಿಸಲಾಯಿತು ಸದರಿ ವಿಷಯದ ಬಗ್ಗೆ ಕ್ರೀಡಾಧಿಕಾರಿ, ಕವಿಪ್ರನಿನಿ ರವರನ್ನು ನಿರ್ದೇಶಕರು(ಆ ಮತ್ತು ಮಾ.ಸಂ), ಕವಿಪ್ರನಿನಿ ರವರೊಂದಿಗೆ ಚರ್ಚಿಸಲು ಆದೇಶಿಸಿರುತ್ತಾರೆ.

ಸಭೆಯ ಅಧ್ಯಕ್ಷರಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**"ಮಾನ್ಯ ನಿರ್ದೇಶಕರು (ತಾಂತ್ರಿಕ), ಕವಿಪ್ರನಿನಿ ಮತ್ತು ನಿರ್ದೇಶಕರು (ಆ ಮತ್ತು ಮಾ.ಸಂ) ರವರಿಂದ ಅನುಮೋದಿಸಲ್ಪಟ್ಟಿದೆ"**

H. S. Somashankara 29/3/22
**ಪ್ರಧಾನ ಕಾರ್ಯದರ್ಶಿ,**
**ಕವಿಪ್ರನಿನಿ, ಕ್ರೀಡಾ ಸಂಸ್ಥೆ, ಮಾ.ಸಂ.ಅ**
**ಕೇಂದ್ರ, ಕವಿಪ್ರನಿನಿ, ಹೂಡಿ ಬೆಂಗಳೂರು.**

**ಮೆಮೋ. ಸಂಖ್ಯೆ: ಕವಿಪ್ರನಿನಿ/ಬಿ67/88930/2021-22** **ದಿನಾಂಕ:** 29 MAR 2022

**ಪ್ರತಿಗಳು:**

1. ನಿರ್ದೇಶಕರು(ಪ್ರಸರಣ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ನಿರ್ದೇಶಕರು (ಆ ಮತ್ತು ಮಾ.ಸಂ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
3. ಆರ್ಥಿಕ ಸಲಹೆಗಾರರು(ಲೆ & ಸಂ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಮುಖ್ಯ ಪ್ರಧಾನ ವ್ಯವಸ್ಥಾಪಕರು (ಆಂ.ಪ) ಬೆಸ್ಕಾಂ, ಕೆ.ಆರ್.ವೃತ್ತ, ಬೆಂಗಳೂರು.
5. ಮುಖ್ಯ ಇಂಜನಿಯರ್(ವಿ) ಮತ್ತು ಕ್ರೀಡಾ ಸಮಿತಿ ಅಧ್ಯಕ್ಷರು, ಬಿಎಮ್ಎಜಡ್ ಹಾಗೂ ಉತ್ತರ ಮತ್ತು ದಕ್ಷಿಣ ವಲಯ ಬೆಸ್ಕಾಂ, ಬೆಂಗಳೂರು.
6. ಮುಖ್ಯ ಇಂಜನಿಯರ್(ವಿ) ಮತ್ತು ಕ್ರೀಡಾ ಸಮಿತಿ ಉಪಾಧ್ಯಕ್ಷರು, ಬಿಆರ್ಎಜಡ್, ಬೆಸ್ಕಾಂ, ಬೆಂಗಳೂರು/ಚಿತ್ರದುರ್ಗ.
7. ಮುಖ್ಯ ಇಂಜನಿಯರ್(ವಿ) ಮತ್ತು ಕ್ರೀಡಾ ಸಮಿತಿ ಅಧ್ಯಕ್ಷರು, ಕಾ ಮತ್ತು ಪಾ ವಲಯ, ಜೆಸ್ಕಾಂ, ಗುಲ್ಬರ್ಗ/ಮೆಸ್ಕಾಂ, ಮಂಗಳೂರು/ಹೆಸ್ಕಾಂ, ಹುಬ್ಬಳ್ಳಿ/ಸೆಸ್ಕ, ಮೈಸೂರು.
8. ನಿಯಂತ್ರಣಾಧಿಕಾರಿಗಳು, ಕಾ ಮತ್ತು ಪಾ ವಲಯ ಕಚೇರಿ, ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಜೆಸ್ಕಾಂ ಮತ್ತು ಸೆಸ್ಕ್.
9. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ/ಬೆಸ್ಕಾಂ/ಎಸ್ಕಾಂ/ಜೆಸ್ಕಾಂ/ಮೆಸ್ಕಾಂ/ಸೆಸ್ಕ ರವರುಗಳ ಆಪ್ತ ಕಾರ್ಯದರ್ಶಿಗಳು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರುಗಳ ದಯಾಪರ ಗಮನಕ್ಕೆ ತರುವ ಸಲುವಾಗಿ ಮಾಹಿತಿ ನೀಡುವ ಸಲುವಾಗಿ.
10. ಅಧೀಕ್ಷಕ ಇಂಜನಿಯರ್(ವಿ)ಐಟಿ ಮತ್ತು ಎಮ್ಐಎಸ್, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು (ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಿದೆ.)
11. ಶ್ರೀ ಕೆ ಬಲರಾಮ್, ಹಿರಿಯ ಉಪಾಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ (659) ಬೆಂಗಳೂರು.
12. ಶ್ರೀ ರಾಘವೇಂದ್ರ.ಎಸ್.ಎನ್,ಲೆಕ್ಕಾಧಿಕಾರಿ ಹಾಗೂ ಕ್ರೀಡಾ ಕಾರ್ಯದರ್ಶಿ, ಜೆಸ್ಕಾಂ ಕ್ರೀಡಾ ಸಮಿತಿ, ಕಲಬುರಗಿ.
13. ಶ್ರೀ ಶಾಂತಾನಂದ ಶೆಟ್ಟಿ, ಲೆಕ್ಕಾಧಿಕಾರ ಹಾಗೂ ಕ್ರೀಡಾ ಕಾರ್ಯದರ್ಶಿ, ಮೆಸ್ಕಾಂ ಕ್ರೀಡಾ ಸಮಿತಿ, ಮಂಗಳೂರು.
14. ಶ್ರೀಮತಿ ನಿಖಿತ ತೇಜ ಆಚಾರ್, ಲೆಕ್ಕಾಧಿಕಾರಿ, ಟಿ.ಬಿ.ಸಿ, ಕವಿಪ್ರನಿನಿ ಹಾಗೂ ಮಹಿಳೆ ಪ್ರತಿನಿಧಿ.
15. ಶ್ರೀ ಎಂ.ಎ ಮಂಜುನಾಥ, ಹಿರಿಯ ಸಹಾಯಕ, ಕ್ರೀಡಾ ಕಾರ್ಯದರ್ಶಿ, ಕ್ರೀಡಾ ಸಮಿತಿ, ಸೆಸ್ಕ್, ಮೈಸೂರು.
16. ಶ್ರೀ ವಿಷ್ಣು ವೈ ಕಟ್ಟಣ್ಣವರ್, ಕ್ರೀಡಾ ಕಾರ್ಯದರ್ಶಿ, ಕ್ರೀಡಾ ಸಮಿತಿ, ಹೆಸ್ಕಾಂ.
17. ಕಾರ್ಯದರ್ಶಿಗಳು ಮತ್ತು ಖಜಾಂಚಿಗಳು ಕಂಪನಿ ಕ್ರೀಡಾ ಸಮಿತಿ, ಬೆಸ್ಕಾಂ/ಎಸ್ಕಾಂ/ಸೆಸ್ಕ/ಹೆಸ್ಕಾಂ/ಜೆಸ್ಕಾಂ
18. ಶ್ರೀ ಅನಿಲ್ ಮುಗಳಿ, ಲೆಕ್ಕಾಧಿಕಾರಿ, ಕಂಪನಿ ಕಾರ್ಯಾಲಯ, ಗೆಸ್ಕಾಂ, ಕಲಬುರಗಿ.
19. ಶ್ರೀ ಜೆ ಲೋಕೇಶ್, ಅಧ್ಯಕ್ಷರು, ಕವಿಪ್ರನಿನಿ, ಡಿಪ್ಲೋಮೊ ಇಂಜನಿಯರ್ ಸಂಘದ ಪ್ರತಿನಿಧಿ.
20. ಶ್ರೀ ರಾಜ್‌ಕುಮಾರ್ ಎಸ್, ಸಾ.ಕಾ.ಇಂ ಬಿ.ಆರ್.ಸಿ ಹಾಗೂ ಉಪ ಖಜಾಂಚಿ, ಪ.ಪಂ ಕಲ್ಯಾಣ ಸಂಘ.
21. ಶ್ರೀ ಜಿ ಗುರುಲಿಂಗಯ್ಯ, ಪ್ರಧಾನ ಕಾರ್ಯದರ್ಶಿ, ಪ.ಪಂ ಕಲ್ಯಾಣ ಸಂಘದ ಪ್ರತಿನಿಧಿ.
22. ಶ್ರೀ ಬಿ ವಿ ನಾಗರಾಜ್, ಕಾರ್ಯದರ್ಶಿ ಕವಿಮಂ ಇಂಜಿನಿಯರ್ಸ್ ಸಂಘ.
23. ಶ್ರೀ ನಾಗಭೂಷಣ್ ಎನ್ ಜಿ, ಜಂಟಿ ಕಾರ್ಯದರ್ಶಿ ಕವಿಮಂ ಇಂಜಿನಿಯರ್ಸ್ ಸಂಘ.
24. ಶ್ರೀ ಜಗದೀಶ್, ಹಿರಿಯ ಸಹಾಯಕ, ಕವಿಪ್ರನಿ, ನೌಕರರ ಸಂಘದ ಪ್ರತಿನಿಧಿ.
25. ಶ್ರೀ ಮಹೇಶ್ ಬಿ ಎನ್, ಕಿರಿಯ ಸಹಾಯಕ, ಕವಿಪ್ರನಿ ನೌಕರರ ಸಂಘದ ಪ್ರತಿನಿಧಿ
26. ಶ್ರೀ ಎನ್.ನೀಲಕುಮಾರ್, ಕಿರಿಯ ಆಪ್ತಸಹಾಯಕ, ಟಿಎ&ಕ್ಯೂಸಿ ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
27. ಶ್ರೀ ಡಿ. ರಾಜ್‌ಕುಮಾರ್, ಸಹಾಯಕ, ಕ್ರೀಡಾ ಶಾಖೆ, ಕವಿಪ್ರನಿನಿ, ಮಾ.ಸಂ.ಅ ಕೇಂದ್ರ ಕವಿಪ್ರನಿನಿ, ಬೆಂಗಳೂರು.
28. ಶ್ರೀ ಮೋಹನ್ ಹೆಚ್ ಎಂ, ಕಿರಿಯ ಇಂಜಿನಿಯರ್, ದೂರ ಸಂಪರ್ಕ ವಿಭಾಗ, ಕನವಿಪ್ರನಿನಿ, ಬೆಂಗಳೂರು.
29. ಶ್ರೀ ಮಂಜುನಾಥ್ ಅರ್, ಮೆ.ಗ್ರೇ 1, ದೂರ ಸಂಪರ್ಕ ವಿಭಾಗ, ಕನವಿಪ್ರನಿನಿ, ಬೆಂಗಳೂರು.